RNU AIR DHARWAD

**NOVEMBER 10,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

ವಕ್ಫ್ ಬೋರ್ಡ್‌ನಿಂದ ಖಾತೆಗಳ ಬದಲಾವಣೆ ಬಗ್ಗೆ, ದೂರುಗಳು ಸಲ್ಲಿಕೆಯಾದ ಹಿನ್ನೆಲೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಂದಾಯ ಇಲಾಖೆಯ ಎಲ್ಲ ಪ್ರಾದೇಶಿಕ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ, ಮಹತ್ವದ ನಿರ್ದೇಶನ ನೀಡಿದ್ದಾರೆ. ಯಾವುದೇ ಕಚೇರಿ ಅಥವಾ ಪ್ರಾಧಿಕಾರದಿಂದ ಈ ಹಿಂದೆ ನೀಡಲಾದ ನಿರ್ದೇಶನಗಳನ್ನು, ತಕ್ಷಣದಿಂದಲೇ ಹಿಂಪಡೆಯುವಂತೆ, ಮುಖ್ಯಮಂತ್ರಿ ಸೂಚಿಸಿದ್ದಾರೆ. ಮ್ಯುಟೇಶನ್ ಪ್ರಕ್ರಿಯೆ ಕೂಡಲೇ ಸ್ಥಗಿತಗೊಳಿಸಿ, ಸದರಿ ಜಮೀನುಗಳಲ್ಲಿ ವ್ಯವಸಾಯ ಕೈಗೊಂಡಿರುವ ರೈತರ ವಿರುದ್ಧ ಯಾವುದೇ ಕ್ರಮ ಜರುಗಿಸದಂತೆ, ಅವರು ನಿರ್ದೇಶಿಸಿದ್ದಾರೆ.

<><><>

ನಾಳೆ, ಸೋಮವಾರ, 11ನೇ ತಾರೀಖು ಸಂಜೆ 5.30ಕ್ಕೆ, ರಾಜ್ಯದ ಮೂರೂ ವಿಧಾನಸಭಾ ಕ್ಷೇತ್ರಗಳ ಉಪ ಚುನಾಣೆಯ ಬಹಿರಂಗ ಪ್ರಚಾರ ಅಂತ್ಯವಾಗಲಿದೆ. ಹೀಗಾಗಿ, ರಾಜ್ಯದ ಚನ್ನಪಟ್ಟಣ, ಸಂಡೂರು ಮತ್ತು ಶಿಗ್ಗಾಂವ, ಈ ಮೂರೂ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ಪ್ರಚಾರವನ್ನು, ವಿವಿಧ ರಾಜಕೀಯ ಪಕ್ಷಗಳು ಹಾಗೂ ಪಕ್ಷೇತರ ಅಭ್ಯರ್ಥಿಗಳು ತುರಿಸಿನಿಂದ, ಮುಂದುವರೆಸಿದ್ದಾರೆ. ಹಾವೇರಿ ಜಿಲ್ಲೆ, ಶಿಗ್ಗಾಂವ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಭರತ ಬೊಮ್ಮಾಯಿ ಪರ, ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ, ಇಂದು ವಿವಿಧೆಡೆ ಪ್ರಚಾರ ನಡೆಸಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹ್ಮದ ಖಾನ್ ಪಠಾಣ ಪರವಾಗಿ, ಇಂದು ಪ್ರಚಾರ ಸಭೆ ನಡೆಸಲಿದ್ದಾರೆ.

<><><>

ಬೀದರ ಜಿಲ್ಲೆಯ ಅಗ್ರಣಿ ಬ್ಯಾಂಕ್ ಸಭಾಂಗಣದಲ್ಲಿ, ಕೇಂದ್ರದ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್ ಅವರ ಆನ್ಲೈನ್ ವಿಡಿಯೋ ಸಂವಾದ ಸಭೆಯ ಅಧ್ಯಕ್ಷತೆಯಲ್ಲಿ, ಮೈಕ್ರೋ, ಸ್ಮಾಲ್ ಆಂಡ್ ಮೀಡಿಯಂ ಎಂಟರ್‌ಪ್ರೈಸಸ್ – ಎಂ.ಎಸ್.ಎಂ.ಇ ಆಟೋ ಕ್ಲಸ್ಟರ ಸಭೆ ಜರುಗಿತು. ಸಣ್ಣ ಮತ್ತು ಮಧ್ಯಮ ಸ್ಥರದ ಯೋಜನೆಗಳಿಂದ, ಆಟೋ ಕ್ಲಸ್ಟರ್‌ನಂತಹ ಸಣ್ಣ ಘಟಕಗಳಿಗೆ ಬಹಳಷ್ಟು ಪ್ರಯೋಜನವಾಗಿದೆ ಎಂದು, ಅಗ್ರಣಿ ಬ್ಯಾಂಕ್ ವ್ಯವಸ್ಥಾಪಕರು ತಿಳಿಸಿದರು. ಕೇಂದ್ರ ಸರ್ಕಾರ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ ಕ್ಷೇತ್ರಕ್ಕೆ, ಪ್ರೋತ್ಸಾಹ ನೀಡುತ್ತಿದೆ. 2024 ಮಾರ್ಚ್ 31ರ ವರೆಗೆ, 98 ಲಕ್ಷದ 9 ಸಾವಿರ ಹೂಡಿಕೆದಾರರಿಗೆ, 2 ಕೋಟಿ 90 ಲಕ್ಷ ರೂಪಾಯಿಗಳ, ವ್ಯಾಪಾರ ವಿನಾಯಿತಿ

ನೀಡಲಾಗಿದೆ ಎಂದು, ನಿರ್ಮಲಾ ಸೀತಾರಾಮನ್ ಹೇಳಿದರು. ಕೇಂದ್ರ ಸರ್ಕಾರ, ಎಂ.ಎಸ್.ಎಂ.ಇ. ಗಳಿಗೆ, 'ಕಾರ್ಯ ಬಂಡವಾಳ ನಿರ್ವಹಣೆ'ಯನ್ನು ಬೆಂಬಲಿಸುತ್ತಿದೆ. ಸಭೆಯಲ್ಲಿ ಬೀದರಿನ ಆಟೋ ಕ್ಲಸ್ಟರ್ ವ್ಯಾಪ್ತಿಯ, ಎಂ.ಎಸ್.ಎಂ.ಇ ಫಲಾನುಭವಿಗಳು ಭಾಗವಹಿಸಿದ್ದರು.

<><><>

ದೇಶದ ವಿಶಾಲ ಭಾ ಾ ವೈವಿಧ್ಯತೆಯ ಜೊತೆಗೂಡಿ, ಭಾರತೀಯ ರೈಲ್ವೆ ಸಮರ್ಥವಾಗಿ ಸಾಗುತ್ತಿದೆ ಎಂದು, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಪ್ರಕಟಿಸಿದ್ದಾರೆ. **2025**ರ ಜನವರಿ **13** ರಿಂದ, ಪ್ರಯಾಗ್‌ರಾಜ್‌ನಲ್ಲಿ ಕುಂಭಮೇಳ ಆರಂಭವಾಗಲಿದೆ. ಈ ಬಾರಿ ಅಲ್ಲಿ ಕನ್ನಡದ ಕಂಪು ಪಸರಲಿದೆ ಎಂದು, ಸಚಿವರು ತಿಳಿಸಿದ್ದಾರೆ.

<><><>

ಕನ್ನಡದ ನಿಜವಾದ ಶಕ್ತಿ, ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಎಂದು, ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಕುಂ.ವೀರಭದ್ರಪ್ಪ ಹೇಳಿದ್ದಾರೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ, ಡಾಕ್ಟರ್ ಪಾಟೀಲ ಪುಟ್ಟಪ್ಪ ಸಭಾ ಭವನದಲ್ಲಿ ಆಯೋಜಿಸಲಾದ, 'ಕರ್ನಾಟಕ ನಾಮಕರಣ **50**; ಸುವರ್ಣ ಸಂಭ್ರಮದ ಅಂಗವಾಗಿ, 'ಧರೆಗೆ ದೊಡ್ಡವರು' ವಿಚಾರ ಸಂಕಿರಣದಲ್ಲಿ, ಅವರು ಮಾತನಾಡಿದರು. ಕನ್ನಡ ಭಾಷೆ ಆತಂಕದ ಸ್ಥಿತಿಯಲ್ಲಿದೆ. ದಿನ ಮತ್ತು ಜನ ಬಳಕೆಯಲ್ಲಿರುವ ಭಾಷೆ ಮಾತ್ರ ಬದುಕಿ, ಬಾಳುತ್ತದೆ ಎಂದರು.

<><><>

ಕೊಡಗು ಜಿಲ್ಲೆ ಕುಶಾಲನಗರದ ರಥ ಬೀದಿಯಲ್ಲಿ, ಕರ್ನಾಟಕ ನಾಮಕರಣ ಸುವರ್ಣ ಸಂಭ್ರಮದ ಹಿನ್ನೆಲೆ, ಐದು ಸಾವಿರ ಜನ, ಕನ್ನಡ ಗೀತೆಗಳನ್ನು ನಾಳೆ ಪ್ರಸ್ತುತ ಪಡಿಸಲಿದ್ದಾರೆ. ಕೊಡಗು ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಆರ್. ಐಶ್ವರ್ಯ ಮಾಹಿತಿ ನೀಡಿ, ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ, ವಿಶಿಷ್ಟವಾದ ನಾಡ ಗೀತೆ, ರೈತ ಗೀತೆಗಳನ್ನು ಹಾಡುವ ಮೂಲಕ, ಐತಿಹಾಸಿಕ ದಾಖಲೆ ಬರೆಯಲಿದ್ದಾರೆ ಎಂದರು.

<><><>

ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು, ತುಡುಕೂರು ಗ್ರಾಮಗಳ ಕಾಫಿ ತೋಟಗಳಲ್ಲಿ **20** ಕಾಡಾನೆಗಳು ಬೀಡುಬಿಟ್ಟಿದ್ದು, ಸಾರ್ವಜನಿಕರು, ಕಾರ್ಮಿಕರು ಮುನ್ನೆಚ್ಚರಿಕೆ ವಹಿಸುವಂತೆ, ಅರಣ್ಯ ಇಲಾಖೆ ಕೋರಿದೆ. ಕುದುರೆಮುಖ ರಾಷ್ಟ್ರೀಯ ಹೆದ್ದಾರಿಯಲ್ಲಿ, ಕಾಡಾನೆಯೊಂದು ಸಂಚರಿಸುತ್ತಿದ್ದು, ವಾಹನ ಸವಾರರು ಎಚ್ಚರದಿಂದ ಕ್ರಮಿಸುವಂತೆ, ಅರಣ್ಯಾಧಿಕಾರಿ ಮನವಿ ಮಾಡಿದ್ದಾರೆ.

<><><>

ಹಾವೇರಿ ಜಿಲ್ಲೆ, ಹಾನಗಲ್ ತಾಲೂಕಿನಲ್ಲಿ, ಆತ್ಮಹತ್ಯೆ ಮಾಡಿಕೊಂಡ ರೈತನ ಮನೆಗೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳಿದರು.

<><><>

ಜಾಗತಿಕವಾಗಿ ಆರೋಗ್ಯವನ್ನು ಕಾಪಾಡುವಲ್ಲಿ, ಲಸಿಕೆಗಳ ಪ್ರಾಮುಖ್ಯತೆ ಬಗ್ಗೆ, ಜನ ಜಾಗ್ರತಿ ಮೂಡಿಸಲು, ಇಂದು, ವಿಶ್ವ ರೋಗ ನಿರೋಧಕ ದಿನವನ್ನು, ಆಚರಿಸಲಾಗುತ್ತಿದೆ. ದಡಾರ, ಪೋಲಿಯೊ ಮತ್ತು ಸಾಂಕ್ರಾಮಿಕ ಕಾಯಿಲೆಗಳಿಂದ ಪೂರ್ವ ಸುರಕ್ಷೆಯ ಲಸಿಕೆ ಪಡೆಯಲು, ಪ್ರೇರೇಪಿಸುವ ದಿನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ

<><><>